ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017–18 ದಿನಾಂಕ: 10–11–2017

# ಪತ್ರಿಕಾ ಆಮಂತ್ರಣ

1. Passing out Parade of BSF Sub Inspector Trainees of Batch no. 63

   Chief Guest:
   Shri Subhash Chandra, IAS,
   Additional Chief Secretary to the Government Of Karnataka

   Date: 11-11-2017, Saturday, Time: at 9-00 a.m.
   Venue: BSF Subsidiary Training Centre, Parade Ground Yelahanka, Bengaluru.

2. 3rd Edition of Social Entrepreneurs and Enterprises (SEE)- Agriculture

   Key Speakers
   Mr. Krishna Byre Gowda, Agriculture Minister.

   Date: 11-11-2017 at Saturday at 9-00 A.M.
   Venue: Indian Institute of Management, Bannerghatta Road, Bangalore

3. Conference:
   Regional Conference of Southern Region
   Organized by National Legal Service Authority and Karnataka State Legal Services Authority

   Inauguration:
   Hon' Mr. Justice Rajan Gogoi
   Judge, Supreme Court of India and Executive Chairman NALSA

   Date: 11-11-2017, Saturday, Time : 10.00 AM.
   Place: Banquet Hall of Vidhana Soudha, Bengaluru.

4. ಬೆಳ್ಳಂದೂರು ಅಮಾನಿಖಾನೆ, ಹೊರಮಾವು–ಅಗ, ದೊಡ್ಡಬೆಲೆ ಹಾಗೂ ಕಾಡುಗೋಡಿಯಲ್ಲಿ ಹೊಸದಾಗಿ ನಿರ್ಮಿಸಿರುವ ಒಟ್ಟು 136 ದ.ಲ.ಲೀ (ಎಂ.ಎಲ್.ಡಿ.) ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳ ಲೋಕಾರ್ಪಣಾ ಸಮಾರಂಭ.

**ಉದ್ಘಾಟನೆ:**
ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.

**ಅಧ್ಯಕ್ಷತೆ:**
ಅರವಿಂದ ಲಿಂಬಾವಳಿ, ಶಾಸಕರು, ಮಹದೇವಪುರ ವಿಧಾನಸಭಾ ಕ್ಷೇತ್ರ.

ದಿನಾಂಕ: 11–11–2017, ಶನಿವಾರ – ಸಮಯ : ಸಂಜೆ 4.00 ಗಂಟೆಗೆ
ಸ್ಥಳ: ಬೆಳ್ಳಂದೂರು ಅಮಾನಿಖಾನೆ ಎಸ್‌ಟಿಪಿ ಆವರಣ, ಬೆಂಗಳೂರು ಜಲಮಂಡಲಿ, ಬೆಳೆಗೆರೆ, ವರ್ತೂರು–ಪಣತ್ತೂರು ರಸ್ತೆ, ಬೆಂಗಳೂರು –87.

ಸಂಖ್ಯೆ:280/400

ಪತ್ರಿಕಾ ಪ್ರಕಟಣೆ

# ನವೆಂಬರ್ 13 ರಿಂದ ಬೆಳಗಾವಿಯಲ್ಲಿ ಅಧಿವೇಶನ

**ಬೆಂಗಳೂರು, ನವೆಂಬರ್ 10, (ಕರ್ನಾಟಕ ವಾರ್ತೆ)**

**ಬೆಳಗಾವಿಯ ಸುವರ್ಣ ಸೌಧದಲ್ಲಿ ನವೆಂಬರ್ 13, 2017 ರಿಂದ ನವೆಂಬರ್ 24, 2017 ರ ವರಗೆ ಒಟ್ಟು ಹತ್ತು ದಿನಗಳ ಕಾಲ 133ನೇ ಅಧಿವೇಶನದ ಮುಂದುವರೆದ ಉಪವೇಶನಗಳ ಅಧಿಕೃತ ಕಾರ್ಯಕಲಾಪಗಳು ನಡೆಯಲಿವೆ ಎಂದು ವಿಧಾನ ಪರಿಷತ್ ಸಭಾಪತಿ ಡಿ.ಹೆಚ್. ಶಂಕರಮೂರ್ತಿ ಅವರು ತಿಳಿಸಿದರು.**

**ಕಾರ್ಯದರ್ಶಿಗಳಿಂದ ವರದಿ ಮಂಡನೆ (ಒಟ್ಟು 14 ವಿಧೇಯಕಗಳು), ಅಗಲಿದ ಗಣ್ಯರಿಗೆ ಸಂತಾಪ ಸೂಚನೆ, ಪ್ರಶ್ನೋತ್ತರ ಅವಧಿ, ಶಾಸನ ರಚನೆ ಮತ್ತು ಖಾಸಗಿ ಕಾರ್ಯಕಲಾಪಗಳು**

ನಡೆಯಲಿವೆ ಎಂದು ಅವರು ವಿಧಾನಸೌಧದಲ್ಲಿ ಇಂದು ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಪ್ರಸ್ತುತ ಅಧಿವೇಶನಕ್ಕೆ ಒಟ್ಟು 805 ಪ್ರಶ್ನೆಗಳು ಸ್ವೀಕರಿಸಿದ್ದು, ಅವುಗಳಲ್ಲಿ 75 ಚುಕ್ಕೆ ಗುರುತಿನ ಪ್ರಶ್ನೆ ಹಾಗೂ 730 ಚುಕ್ಕೆ ರಹಿತ ಪ್ರಶ್ನೆಗಳಾಗಿರುತ್ತದೆ, ನಿಯಮ 72 ರ ಅಡಿಯಲ್ಲಿ 58 ಸೂಚನೆಗಳನ್ನು ಹಾಗೂ ನಿಯಮ 330 ರ ಅಡಿ 18 ಸೂಚನೆಗಳನ್ನು ಸ್ವೀಕರಿಸಲಾಗಿದೆ ಎಂದು ಅವರು ವಿವರಿಸಿದರು.

ನವೆಂಬರ್ 18 ರ ಶನಿವಾರ ಕಾರವಾರದ ನೌಕಾ ನೆಲೆಗೆ ವಿಧಾನ ಪರಿಷತ್ ಸದಸ್ಯರುಗಳನ್ನು ಕರೆದೊಯ್ದು, ಸೀಬರ್ಡ್ ಯೋಜನೆ ಬಗ್ಗೆ ಮಾಹಿತಿ ಒದಗಿಸಲಾಗುವುದು ಎಂದು ಸಭಾಪತಿಗಳು ತಿಳಿಸಿದರು.

ಪ್ರತಿ ವರ್ಷ ಕನಿಷ್ಠ 60 ದಿನಗಳ ಕಾಲ ವಿಧಾನ ಮಂಡಲ ಅಧಿವೇಶನ ನಡೆಯಬೇಕು ಎಂಬುದು ತಮ್ಮ ಆಶಯವಾಗಿದೆ ಎಂದ ಅವರು, ಪ್ರಸಕ್ತ ವರ್ಷ 30 ದಿನಗಳ ಕಾಲ ಅಧಿವೇಶನ ನಡೆಸಲಾಗಿದ್ದು, ಬೆಳಗಾವಿಯ ಚಳಿಗಾಲದ ಅಧಿವೇಶನ ಸೇರಿದಂತೆ ಈ ವರ್ಷ ಒಟ್ಟು 40 ದಿನಗಳ ಕಾಲ ಅಧಿವೇಶನ ನಡೆಸಿದಂತಾಗುವುದು ಎಂದರು.

ವಿಧಾನ ಪರಿಷತ್‌ನಲ್ಲಿ ಸದಸ್ಯರ ಹಾಜರಾತಿ 75 ಕ್ಕೆ 38 ರಷ್ಟಿದೆ. ಮುಂದಿನ ದಿನಗಳಲ್ಲಿ ಸದಸ್ಯರ ಹಾಜರಾತಿಯನ್ನು ಮತ್ತಷ್ಟು ಹೆಚ್ಚಿಸಲು ಪ್ರಯತ್ನಿಸಲಾಗುವುದು ಎಂದರು.

ಬೆಳಗಾವಿ ಪ್ರಸಕ್ತ ಅಧಿವೇಶನದ ಭದ್ರತೆ ಮತ್ತಿತರ ವ್ಯವಸ್ಥೆಗಳಿಗಾಗಿ 5000 ಕ್ಕೂ ಹೆಚ್ಚಿನ ಪೊಲೀಸರನ್ನು ನಿಯೋಜಿಸಲಾಗಿದ್ದು, ಅವರುಗಳು ಉಳಿದುಕೊಳ್ಳಲು ಸೂಕ್ತ ವ್ಯವಸ್ಥೆ ಮಾಡಲಾಗಿದೆ ಎಂದು ಅವರು ತಿಳಿಸಿದರು.

ಎಂಆರ್‌ಎಂ:ಜೆಡಿ:ಜಿಪಿಆರ್

ಸಂಖ್ಯೆ:281/401

## ಕೆಲಸ ಮಾಡುವ ಸ್ಥಳಗಳಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ಕಿರುಕುಳ ತಡೆಯಲು ಕ್ರಮ – ರತ್ನಪ್ರಭಾ

**ಬೆಂಗಳೂರು, ನವೆಂಬರ್ 10, (ಕರ್ನಾಟಕ ವಾರ್ತೆ)**

ಕೆಲಸ ಮಾಡುವ ಸ್ಥಳಗಳಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ಕಿರುಕುಳ ತಡೆಯಲು ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ, ಸಂಸ್ಥೆಗಳಲ್ಲಿ ದೂರು ಸಮಿತಿಯು ಕಡ್ಡಾಯವಾಗಿ ಕೆಲಸ ನಿರ್ವಹಿಸಬೇಕು ಎಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಾದ ಶ್ರೀಮತಿ ರತ್ನಪ್ರಭಾ ಅವರು ತಿಳಿಸಿದರು.

ಅವರು ಇಂದು ತಮ್ಮ ಕಚೇರಿಯಲ್ಲಿ ಈ ಕುರಿತು ಸ್ಥಾಪಿಸಲಾದ ರಾಜ್ಯ ಮಟ್ಟದ ಸಕ್ಷಮ ಪ್ರಾಧಿಕಾರದ ಸಮಿತಿ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಮಹಿಳೆಯರು ಅದರಲ್ಲೂ ಕೆಲಸ ನಿರ್ವಹಿಸುವ ಮಹಿಳೆಯರಿಗೆ ಭದ್ರತೆ ಒದಗಿಸಬೇಕು. ಅವರು ಉದ್ಯೋಗದಲ್ಲಿದ್ದಾಗ ಯಾವುದೇ ಮಾನಸಿಕ, ದೈಹಿಕ ಕಿರುಕುಳ ದೌರ್ಜನ್ಯ ಎಸಗಿರುವುದು ಕಂಡು ಬಂದಲ್ಲಿ ಅವರು ಸಮಿತಿಗೆ ದೂರು ನೀಡಬಹುದು.

ಎಲ್ಲಾ ಸರ್ಕಾರಿ ಕಚೇರಿ, ಐ.ಟಿ. ಸಂಸ್ಥೆಗಳು, ಸಂಘ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುವ ಮಹಿಳೆಯರು ತಮ್ಮಗಾಗಿರುವ ಕಿರುಕುಳದ ಬಗ್ಗೆ ಸ್ಥಾಪಿಸಲಾಗಿರುವ ದೂರು ಪ್ರಾಧಿಕಾರಕ್ಕೆ ದೂರನ್ನು ಸಲ್ಲಿಸಬಹುದು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ವತಿಯಿಂದ ಸಾಮಾಜಿಕ ಜಾಲ ತಾಣ, ಇಲಾಖೆಯ ವೆಬ್‌ಸೈಟ್, ಮುಖ್ಯಮಂತ್ರಿಗಳ ಕಚೇರಿ ಆ್ಯಪ್‌ಗಳಲ್ಲಿ ವ್ಯಾಪಕ ಪ್ರಚಾರ ನೀಡಬೇಕು. ದಿನ ಪತ್ರಿಕೆ, ಟಿ.ವಿ. ಮಾಧ್ಯಮದಲ್ಲೂ ಈ ಕುರಿತು ಅರಿವು ಮೂಡಿಸಬೇಕು. ಈ ದೂರು ಪ್ರಾಧಿಕಾರದ ಕುರಿತು ನಾಮಫಲಕದಲ್ಲಿ ಎಲ್ಲಾ ಕಚೇರಿಗಳಲ್ಲಿ ಹಾಕುವುದರ ಮೂಲಕ ಮಹಿಳೆಯರಲ್ಲಿ ಧೈರ್ಯ, ಆತ್ಮವಿಶ್ವಾಸ ಮೂಡಿಸಬಹುದು. ಎಲ್ಲಕ್ಕಿಂತಲೂ ಮುಖ್ಯವಾಗಿ ಮಹಿಳೆಯರ ಮೇಲಿನ ದೌರ್ಜನ್ಯ ನಡೆಯದಂತೆ ತಡೆಯುವುದು ಪ್ರತಿಯೊಬ್ಬರ ಹೊಣೆಯಾಗಿದೆ ಎಂದರು.

ಸಭೆಯಲ್ಲಿ ಮಾತನಾಡಿದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಉಮಾ ಮಹದೇವನ್ ಮಾತನಾಡಿ, ಸರ್ಕಾರದ ಒಟ್ಟು 72 ಇಲಾಖೆಗಳಲ್ಲಿ 34 ಇಲಾಖೆಗಳಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ತಡೆಲು ಸಮಿತಿಗಳನ್ನು ರಚಿಸಲಾಗಿದೆ. 30 ಜಿಲ್ಲೆಗಳಲ್ಲೂ ಸಹ ಸ್ಥಳಿಯ ಮಹಿಳಾ ದೂರು ಸಮಿತಿ ರಚನೆಯಾಗಿದೆ. 73 ಐ.ಟಿ.

ಕಂಪೆನಿಗಳಲ್ಲಿ ಮಹಿಳಾ ದೂರು ಸಮಿತಿ ರಚಿಸಲಾಗಿದೆ. ಈ ಕುರಿತು ಅರಿವು ಮೂಡಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. ಸಮಿತಿಯು ತರಬೇತಿ ಕಾರ್ಯಾಗಾರವನ್ನು ಸಹ ಮುಂಬರುವ ದಿನಗಳಲ್ಲಿ ಹಮ್ಮಿಕೊಳ್ಳುತ್ತದೆ. ಸಾಮಾಜಿಕ ಜಾಲತಾಣ, ಮಾಧ್ಯಮಗಳು, ಪೋಸ್ಟರ್ ಇತ್ಯಾದಿಗಳ ಮೂಲಕ ಮಹಿಳೆಯರಿಗೆ ಈ ಕುರಿತು ಅರಿವು ಮೂಡಿಸಲಾಗುವುದೆಂದರು.

ಸಭೆಯಲ್ಲಿ ಇಲಾಖೆಯ ಇನ್ನಿತರ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಕವನ:ಜೆಡಿ:ಜಿಪಿಆರ್.

ಸಂಖ್ಯೆ:282/402

## "ಶಾಲಾಕ್ಯ ಪ್ರಬೋಧಿನಿ–2017 "
## ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನ

**ಬೆಂಗಳೂರು, ನವೆಂಬರ್ 10, (ಕರ್ನಾಟಕ ವಾರ್ತೆ)** ಬೆಂಗಳೂರಿನ ಶಿಕ್ಷಕರ ಭವನದಲ್ಲಿ ಇಂದು ಬೆಳಗ್ಗೆ ಸರ್ಕಾರದ ಆಯುರ್ವೇದ ಮೆಡಿಕಲ್ ಕಾಲೇಜ್ ಮತ್ತು ಶಾಲಾಕ್ಯ ತಂತ್ರದಲ್ಲಿ ಸ್ನಾತಕೋತ್ತರ ಅಧ್ಯಯನಗಳ ಇಲಾಖೆಯ ಸಹಯೋಗದೊಂದಿಗೆ "ಶಾಲಾಕ್ಯ ಪ್ರಬೋಧಿನಿ–2017 " ಎಂಬ ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನವನ್ನು ಏರ್ಪಡಿಸಲಾಗಿತ್ತು.

ಸಮ್ಮೇಳನವನ್ನು ಸೆಂಟ್ರಲ್ ಕೌನ್ಸಿಲ್ ಫಾರ್ ರಿಸರ್ಚ್ ಇನ್ ಆಯುರ್ವೇದಿಕ್ ಸೈನ್ಸ್ ನ (CCRAS) ಡೈರೆಕ್ಟರ್ ಜನರಲ್ ಅವರಾದ ಪ್ರೊ॥ ಕೆ.ಎಸ್. ಧೀಮನ್ ಅವರು ಉದ್ಘಾಟಿಸಿದರು. ದೇಶದ ಪಾರಂಪರಿಕ ಸಂಸ್ಕೃತಿಯನ್ನು ಅನಾವರಣಗೊಳಿಸುವಂತೆ ಮಾವಂಜೆ ಶಿವರಾಮಭಟ್ ಮತ್ತು ತಂಡದವರಿಂದ ತಾಳ, ಮದ್ದಳೆ ಮಂಗಳ ವಾದ್ಯದೊಂದಿಗೆ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದು ವಿಶೇಷವಾಗಿತ್ತು.

ಉದ್ಘಾಟನೆ ಮಾಡಿ ಪ್ರಾಸ್ತಾವಿಕ ನುಡಿಗಳನ್ನಾಡಿದ ಡಾ॥ ಕೆ.ಎಸ್. ಧೀಮನ್ ಅವರು ಆಯುರ್ವೇದವು ದೇಶದ ಜನರ ಧಾರ್ಮಿಕ ಮತ್ತು ಸಾಂಸ್ಕೃತಿಕ ಪದ್ಧತಿಗಳಲ್ಲಿ ಹಾಸುಹೊಕ್ಕಾಗಿದೆ. ಇವತ್ತು ಆಯುರ್ವೇದ ಔಷಧ ಪ್ರತಿಯೊಬ್ಬರಿಗೂ ಅವಶ್ಯಕವಾಗಿದೆ. ಇಂದಿನ ಹವಾಮಾನ ವೈಪರೀತ್ಯ, ಪ್ರದೋಷಣೆ, ಮಾಲಿನ್ಯದಿಂದ ತುಂಬಿದ ನಗರಗಳ ಜನಜೀವನ ಶೈಲಿ ಬದಲಾಗಬೇಕಿದೆ. ಪಾರಂಪರಿಕ ಆಯುರ್ವೇದ ಪದ್ಧತಿ ಇಂದಿನ ಮಾಡ್ರನ್ ಯುಗಕ್ಕೂ ಹೊಂದಿಕೆಯಾಗುವುದಲ್ಲದೆ ವೈಜ್ಞಾನಿಕವಾಗಿ ಅನೇಕ ಪ್ರಯೋಗಗಳಿಂದ ದೃಢಪಟ್ಟಿದೆ ಎಂದರು. ಇದೇ ಸಂದರ್ಭದಲ್ಲಿ ಆಯುಶ್ ಮತ್ತು ವಿಜ್ಞಾನದ ಹಲವಾರು ರೂಪಗಳ ಸಂಗ್ರಹದ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು.

ಎರಡು ದಿನಗಳ ಕಾಲ ಏರ್ಪಡಿಸಿರುವ ಈ ಸಮ್ಮೇಳನದಲ್ಲಿ ಆಯುರ್ವೆದ ಔಷಧಗಳ ಬಳಕೆ, ಆಯುರ್ವೇದ ಚಿಕಿತ್ಸೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಸಮೂಹ ಚರ್ಚೆ (Pannel Discussion) ಏರ್ಪಡಿಸಲಾಗಿತ್ತು.

ಪಿಎಸ್ಐ

ಸಂಖ್ಯೆ:283/403

ಪತ್ರಿಕಾ ಪ್ರಕಟಣೆ

# ಇಲಾಖಾ ಪರೀಕ್ಷೆ ನಡೆಯಲಿರುವ ಕೇಂದ್ರಗಳ ವಿವರ

**ಬೆಂಗಳೂರು, ನವೆಂಬರ್ 10, (ಕರ್ನಾಟಕ ವಾರ್ತೆ)**

ಕರ್ನಾಟಕ ಲೋಕಸೇವಾ ಆಯೋಗವು 2017 ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಗಳನ್ನು ನಡೆಸಲಿದೆ.

ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳು ಮತ್ತು ನವದೆಹಲಿ ಕೇಂದ್ರಗಳಲ್ಲಿ ನವೆಂಬರ್ 11 ರಿಂದ 13 ರವರೆಗೆ, ಬೆಂಗಳೂರು, ಬೆಳಗಾವಿ, ವಿಜಯಪುರ, ಗದಗ ಹಾಗೂ ಕಲಬುರಗಿ, ಮಂಗಳೂರು, ಮೈಸೂರು, ರಾಯಚೂರು, ಶಿವಮೊಗ್ಗ ಕೇಂದ್ರಗಳು ಹಾಗೂ ನವದೆಹಲಿ ಕೇಂದ್ರದಲ್ಲಿ ನವೆಂಬರ್ 15 ರಿಂದ 23 ರವರೆಗೆ. ನವೆಂಬರ್ 25 ರಿಂದ 30 ರವರೆಗೆ ಬೆಂಗಳೂರು ಕೇಂದ್ರದಲ್ಲಿ ಪರೀಕ್ಷೆಗಳು ನಡೆಯಲಿದೆ.

ಸದರಿ ಪರೀಕ್ಷೆಗಳೀಗೆ ಈಗಾಗಲೇ ಅರ್ಜಿ ಸಲ್ಲಿಸಿರುವ ಅರ್ಹ ಅಭ್ಯರ್ಥಿಗಳ ಪ್ರವೇಶ ಪತ್ರಗಳನ್ನು ಆಯೋಗದ ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿದೆ. ಅಭ್ಯರ್ಥಿಗಳು ಆಯೋಗದ ವೆಬ್‌ಸೈಟ್ **"http://kpsc.kar.nic.in"** ನ **Home Page** ನಲ್ಲಿ **"CLICK HERE TO DOWNLOAD ADMISSION TICKET FOR DEPARTMENTAL EXAMINATION 2017 –II SESSION"** ಎನ್ನುವ **LINK** ಅನ್ನು ಕ್ಲಿಕ್ ಮಾಡಿ ತಮ್ಮ ಅರ್ಜಿ ಸಂಖ್ಯೆಗಳನ್ನು ನಮೂದಿಸಿ ಪ್ರವೇಶ ಪತ್ರಗಳನ್ನು ಮತ್ತು "ಅಭ್ಯರ್ಥಿಗಳಿಗೆ ಸೂಚನೆಗಳು" ಪ್ರತಿಯನ್ನು "ಡೌನ್‌ಲೋಡ್" ಮಾಡಿಕೊಳ್ಳಬಹುದಾಗಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಜೆಡಿ:ಜಿಪಿಆರ್.